ಯಾಗಿರುತ್ತದೆ. ಈ ಆಸ್ಪತ್ರೆಯಲ್ಲಿ ಕಳೆದ ಒಂದೂವರೆ ವರ್ಷಗಳಿಂದ ಮಹಿಳಾ ವೈದ್ಯರು ಇಲ್ಲದೆ ಇರುವುದು ರೋಗಿಗಳಿಗೆ ವಿಶೇಷವಾಗಿ ಮಹಿಳಾ ರೋಗಿಗಳಿಗೆ ತೊಂದರೆಯುಂಟಾಗಿದೆ. ಈ ಆಸ್ಪತ್ರೆಗೆ ದಿನಂಪ್ರತಿ ೧೫೦ಕ್ಕೂ ಹೆಚ್ಚು ಹೊರರೋಗಿಗಳು ಬರುತ್ತಿದ್ದು ಅವರನ್ನು ಒಬ್ಬರೇ ವೈದ್ಯರು ತಪಾಸಣೆ ನಡೆಸುವುದು ಕಷ್ಟಸಾಧ್ಯವಾಗಿದೆ. ಅಲ್ಲದೆ ಇತ್ತೀಚೆಗೆ ಈ ಆಸ್ಪತ್ರೆಗೆ ಇಬ್ಬರು ವೈದ್ಯರ ನೇಮಕಾತಿ ಆಗಿದ್ದು ಅವರಿಬ್ಬರೂ ೨ ವರ್ಷಗಳ ರಜೆ ಹಾಕಿ ಹೋಗಿರುತ್ತಾರೆ. ಆದುದರಿಂದ ಬೇರೆ ಇಬ್ಬರು ವೈದ್ಯರನ್ನು ಅದರಲ್ಲಿ ಒಬ್ಬ ಮಹಿಳಾ ವೈದ್ಯರನ್ನು ಈ ಆಸ್ಪತ್ರೆಗೆ ಕೂಡಲೇ ನೇಮಕ ಮಾಡಿಸಬೇಕಾಗಿ ಆರೋಗ್ಯ ಸಚಿವರನ್ನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಆಗಬಹುದು ಸ್ವಾಮಿ. ಆದಷ್ಟು ಬೇಗ ಮಹಿಳಾ ವೈದ್ಯಾಧಿಕಾರಿಯನ್ನು ಆ ಆಸ್ಪತ್ರೆಗೆ ಹಾಕುತ್ತೇನೆ. ಇನ್ನೊಂದು ಸಲಹೆಯನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಯಾರಾದರೂ ಮಹಿಳಾ ವೈದ್ಯಾಧಿಕಾರಿ ಅಲ್ಲಿಗೆ ಬಂದು ಕೆಲಸ ಮಾಡುತ್ತೇನೆ ಎಂದು ಮುಂದೆ ಬಂದರೆ, ಅದನ್ನು ನನಗೆ ತಿಳಿಸಿದರೆ ಇದರಿಂದ ನನಗೆ ಹೆಚ್ಚಿನ ಸಹಾಯವಾಗುತ್ತದೆ ಮತ್ತು ಅವರನ್ನು ಆ ಆಸ್ಪತ್ರೆಗೆ ಹಾಕಿಕೊಡುತ್ತೇನೆ.

ಶಾಸನ ರಚನಾ ಕಲಾಪಗಳು

೧೯೮೬ನೇ ಇಸವಿಯ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೬ನೇ ಇಸವಿಯ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

(ಪ್ರಸ್ತಾವ ಅಂಗೀಕರಿಸಲಾಯಿತು ಮತ್ತು ಅನುಮತಿ ನೀಡಲಾಯಿತು)

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಹಾಗೂ ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

೧೯೮೬ನೇ ಇಸವಿಯ ಕರ್ನಾಟಕ ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ, ದಾಖಲೆಗಳ ಒದಗಿಸುವಿಕೆ ಮತ್ತು ಇನ್ನಿತರ ಉಪಬಂಧಕಗಳು) ತಿದ್ದುಪಡಿ ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ವಿಧೇಯಕವನ್ನು ಮಂಡಿಸಬೇಕು.

SRI A. LAKSHMISAGAR.—On behalf of the Hon'ble Chief Minister I beg to move :

''That the Karnataka Departmental Enquiries (Enforcement of Attendence of Witnesses, Production of

Documents and Miscellaneous Provisions)(Amendment) Bill. 1986 be taken into consideration''

The question was proposed

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಹಾಲಿ ಇರತಕ್ಕಂಥ ಕಾನೂನು ಇದು. ಕರ್ನಾಟಕ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರೀಸ್ ಬಗ್ಗೆ ಇರತಕ್ಕಂಥ ಕಾನೂನು. ಇದು ವಿಜಿಲೆನ್ಸ್ ಕಮಿಷನ್‌ಗೆ ಅನ್ವಯವಾಗುತ್ತಿತ್ತು. ಲೋಕಾಯುಕ್ತ ಕಾಯ್ದೆ ಬಂದ ಮೇಲೆ ವಿಜಿಲೆನ್ಸ್ ಕಮಿಷನ್‌ನ್ನು ತೆಗೆದುಹಾಕಿದ್ದೇವೆ. ಈ ಕಾನೂನಿನ ಸಹಾಯ ಲೋಕಾಯುಕ್ತರಿಗೆ ಇರಲಿಲ್ಲ. ಆದ್ದರಿಂದ ಈ ಕಾನೂನಿನ ಸಹಾಯವನ್ನು ಕೊಡಬೇಕು ಎಂದು ತಿದ್ದುಪಡಿ ಮಸೂದೆಯನ್ನು ಮಂಡಿಸಿದ್ದೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ ಹಾಗೆ ಇಲಾಖಾ ವಿಚಾರಣೆ ಬಗ್ಗೆ ಸಾಕ್ಷಿಗಳ ಹಾಜರಾತಿ ದಾಖಲಾತಿಗಳನ್ನು ಪಡೆಯತಕ್ಕಂಥ ಮತ್ತು ಮಿಸಲೇನಿಯಸ್ ವಿಚಾರಗಳಲ್ಲಿ ಯಾವ ಅಧಿಕಾರಗಳು ಜಾಗೃತಾ ಆಯೋಗಕ್ಕೆ ಇದ್ದವು, ಅವುಗಳನ್ನು ಈಗಿರತಕ್ಕ ಲೋಕಾಯುಕ್ತ, ಉಪಲೋಕಾಯುಕ್ತ ಮತ್ತು ಅವರ ಕೈಕೆಳಗೆ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ಅಧಿಕಾರಗಳನ್ನು ನೀಡತಕ್ಕದ್ದು ಅಥವಾ ಹಕ್ಕನ್ನು ಕೊಡತಕ್ಕದ್ದು ಈ ಮಸೂದೆ. ಇದು ಮೊದಲೇ ಸುಗ್ರೀವಾಜ್ಞೆಯ ಮುಖಾಂತರ ಜಾರಿಗೆ ಬಂದಿರತಕ್ಕದ್ದು. ಇದು ಆರ್ಡಿನೆನ್ಸ್ ರಿಪ್ಲೇಸಿಂಗ್ ಬಿಲ್ ಮಾತ್ರ. ಲೋಕಾಯುಕ್ತ, ಉಪಲೋಕಾಯುಕ್ತ ಮತ್ತು ಅವರ ಅಧೀನ ಅಧಿಕಾರಿಗಳಿಗೆ ಹಕ್ಕನ್ನು, ಶಕ್ತಿಯನ್ನು ಕೊಟ್ಟು ಇಲಾಖಾ ತನಿಖೆಗಳನ್ನು ಮಾಡುವುದಕ್ಕೆ ಶಕ್ತಿಯನ್ನು ನೀಡತಕ್ಕಂಥ ಮಸೂದೆ ಇದು. ನಾವು ಒಂದು ವಿಚಾರವನ್ನು ಗಮನದಲ್ಲಿ ಇಡಬೇಕಾಗುತ್ತದೆ. ಇವತ್ತು ಲೋಕಾಯುಕ್ತ, ಉಪಲೋಕಾಯುಕ್ತ ಅಥವಾ ಅವರ ಅಡಿಯಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ಯಾರೇ ಅಧಿಕಾರ ನೀಡಿದರೂ ಕೂಡಾ ಈಗಾಗಲೇ ಇಲಾಖೆಗಳಲ್ಲಿ ಇರತಕ್ಕ ಲಂಚ ರುಷುವತ್ತು ಮತ್ತು ಬೇರೆ ಬೇರೆ ಕಾನೂನುಗಳನ್ನು ಮುರಿಯತಕ್ಕ ಸಂದರ್ಭಗಳು ಏನೇನು ಇವೆ, ಆ ವಿಚಾರದಲ್ಲಿ ಲೋಕಾಯುಕ್ತ, ಉಪಲೋಕಾಯುಕ್ತರುಗಳು ಅವುಗಳನ್ನು ಸರಿಪಡಿಸಿ ನಮ್ಮಂಥ ಸಮಾಜಕ್ಕೆ ಒಳ್ಳೆಯ ಆಡಳಿತವನ್ನು ಇಂಥ ಅಧಿಕಾರಿಗಳಿಂದ ಪಡೆಯುವುದಕ್ಕೆ ಸಾಧ್ಯವೇ ಎಂಬ ಪ್ರಶ್ನೆ ಇವತ್ತು ನಮ್ಮ ನಿಮ್ಮ ಮುಂದೆ ಇದೆ. ಒಂದು ಮಾತನ್ನು ಒಪ್ಪುತ್ತೇನೆ. ಇಲಾಖೆಗಳಲ್ಲಿ ನಡೆಯತಕ್ಕ ಭ್ರಷ್ಟಾಚಾರ, ಲಂಚಗುಳಿತನ ಇವುಗಳನ್ನು ನಿಲ್ಲಿಸುವುದಕ್ಕೆ ಒಂದು ವಿಚಾರವನ್ನು ಇಟ್ಟು ಪ್ರಯತ್ನ ಮಾಡುತ್ತಿದ್ದೇವೆ ಎಂದರೆ ಇದೆಲ್ಲಾ ಟ್ರೈಯಲ್ ಮತ್ತು ಎರರ್ ಮೆಥೆಡ್ಸ್ ಎಂಬ ಭಾವನೆಯಿಂದ ಸ್ವಾಗತ ಅನಿವಾರ್ಯವಾಗಿ ಮಾಡಬೇಕಾಗಿದೆ. ಇವೊತ್ತು ನಮ್ಮ ಸಮಾಜದಲ್ಲಿ ಬರೀ ಅಧಿಕಾರಿಗಳನ್ನು ವಿಚಾರಣೆ ಮಾಡುವುದು ಎಂದರೆ ಇಲ್ಲಿ ಸ್ಪಷ್ಟವಾಗಿ ಯಾವ ರೀತಿಯ ಅಧಿಕಾರಿಗಳು ಇಲ್ಲಿದ್ದಾರೆ ಎಂಬುದು ಮತ್ತು ಯಾವ ರೀತಿಯ ಸಮಾಜಕ್ಕೆ ಇಂಥ ಅಧಿಕಾರಗಳನ್ನು ಇಟ್ಟುಕೊಂಡಿದ್ದೇವೆ ಎಂಬುದೂ ಬಹಳ ಮುಖ್ಯ. ನಮ್ಮ ಸಮಾಜದಲ್ಲಿಲ್ಲಿ ವಿದ್ಯೆ ಇಲ್ಲದೇ ಇರತಕ್ಕ ಜನಸಾಮಾನ್ಯರು ಬೇಕಾಷ್ಟಿದ್ದಾರೆ. ಸುಮಾರಾಗಿ ಅಕ್ಷರ ಜ್ಞಾನ ಪಡೆಯತಕ್ಕವರ ಸಂಖ್ಯೆ ೬೦-೬೫ರಷ್ಟು. ಆ ಒಂದು ಅಂಕಿಯನ್ನು ನಾವು ತಲುಪಿದ್ದೇವೆ. ಅಂದರೆ ಇನ್ನೂ ಸುಮಾರು ೬೫ರಷ್ಟು ಇನ್ನೂ ಕೂಡ ಅಕ್ಷರಜ್ಞಾನ ಇಲ್ಲದೇ ಇರತಕ್ಕ ಜನ ಸಾಮಾನ್ಯರು, ಬಡವರು, ದೀನದಲಿತರು, ಆರ್ಥಾತ್ ಪೆಟ್ಟಿಟ್ಟು ಒತ್ತುವ ಜನರ ಜೊತೆಯಲ್ಲಿ ಇಂಥ ಅಧಿಕಾರಿಗಳು ಹೊಡೆದಾಟ ಮಾಡತಕ್ಕ ಸಂದರ್ಭ ಇರಬಹುದು. ಸೆಕ್ರೆಟರಿಯೇಟ್‌ನಲ್ಲಿ ಅಂದರೆ ವಿಧಾನಸೌಧದಲ್ಲಿರತಕ್ಕ ಅಧಿಕಾರಿಗಳು ನೇರವಾಗಿ ಜನರ ಸಂಪರ್ಕವನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯುವುದಕ್ಕೆ ಸಾಧ್ಯತೆ ಇಲ್ಲದೇ ಇರಬಹುದು. ನಮ್ಮ ವಿಚಾರಧಾರೆ ನಮ್ಮ ತಾಲ್ಲೂಕಿರಬಹುದು, ನಿಮ್ಮ ತಾಲ್ಲೂಕಿರಬಹುದು, ಮತ್ತೊಂದು ತಾಲ್ಲೂಕಿರಬಹುದು. ನಾವು ನೋಡಿದ್ದೇವೆ, ತಹಸಿಲ್ದಾರ್ ಆಫೀಸ್, ಅವರ ಕೈಕೆಳಗಿರತಕ್ಕ ರೆವಿನ್ಯೂ ಇನ್‌ಸ್ಪೆಕ್ಟರುಗಳು, ನಂತರ ಗ್ರಾಮಲೆಕ್ಕಾಧಿಕಾರಿಗಳು ಅಥವಾ ಅರಣ್ಯ ಇಲಾಖೆ, ಪೋಲೀಸ್ ಇಲಾಖೆ, ಪಿ. ಡಬ್ಲ್ಯೂ. ಡಿ. ಯಾವುದೇ ಇಲಾಖೆ ತೆಗೆದು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೊಂಡರೂ ಕೂಡ ಆ ಮಟ್ಟದಲ್ಲಿ ಜನಸಾಮಾನ್ಯರ ಜೊತೆಗೆ ವ್ಯವಹಾರ ಮಾಡತಕ್ಕ ಅಧಿಕಾರಿಗಳು ನಮಗೆ, ಸಿಗುತ್ತಾರೆ ವಿದ್ಯೆ ಪ್ರಮಾಣ ಹೆಚ್ಚಾಗಿ ಇಲ್ಲದೇ ಇರತಕ್ಕ ನಮ್ಮಂಥ ಸಮಾಜದಲ್ಲಿ ಅಧಿಕಾರಿಗಳು ಪ್ರಾಮಾಣಿಕತೆಯಿಂದ ಜನರಲ್ಲಿರತಕ್ಕ ಅನಕ್ಷರತೆಯನ್ನು ದುರುಪಯೋಗಪಡಿಸಿಕೊಳ್ಳಬಾರದು. ಸರ್ಕಾರದವರು ಸಂಬಳ ಕೊಡುತ್ತಿದ್ದಾರೆ. ಸರ್ಕಾರ ಎಂದರೆ ಯಾವುದು ? ಇವತ್ತು ಜನತಾ ಪಕ್ಷದ ಸರ್ಕಾರ ಇರಬಹುದು, ಕಾಂಗ್ರೆಸ್ ಪಕ್ಷದಸರ್ಕಾರ ಇರಬಹುದು, ಮತ್ತೊಂದು ಪಕ್ಷದ ಸರ್ಕಾರ ಇರಬಹುದು. ಆದರೆ ಒಂದು ಸರ್ಕಾರ ಇದೆ. ಆ ಸರ್ಕಾರ ಸಂಬಳದ ರೂಪದಲ್ಲಿ ಅಧಿಕಾರಿಗಳಿಗೆ ಹಣವನ್ನು ಕೊಡುತ್ತಾರೆ. ಆ ಹಣ ಎಲ್ಲಿಂದ ಬರುತ್ತದೆ ? ಮಾನ್ಯ ಸಭಾಧ್ಯಕ್ಷರೇ, ತಮಗೆ ಗೊತ್ತಿ ರುವಹಾಗೆ ಜನಸಾಮಾನ್ಯರ ತೆರಿಗೆ ಹಣವನ್ನು ಹೆಚ್ಚಿನ ರೂಪದಲ್ಲಿ ನಾವು ಕಾಣುತ್ತೇವೆ. ತಮಗೂ ಗೊತ್ತಿದೆ, ಕರ್ನಾಟಕ ರಾಜ್ಯದಲ್ಲಿ ಹೆಚ್ಚಿನ ವರಮಾನವನ್ನು ಟ್ರೆಜರಿಗೆ ಕೊಡತಕ್ಕದ್ದು, ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್, ಎರಡನೆಯದು ಎಕ್ಸೈಜ್ ಡಿಪಾರ್ಟ್‌ಮೆಂಟ್, ಮತ್ತಿತರ ತೆರಿಗೆ ಹಣ ವಿವಿಧ ರೂಪದಲ್ಲಿ ಬರುತ್ತದೆ. ನಾವು ಹಾಕತಕ್ಕ ಬಟ್ಟೆಗಳ ಮೇಲೆ, ತಿನ್ನತಕ್ಕ ವಸ್ತುಗಳ ಮೇಲೆ, ನಾವು ಉಪಯೋಗ ಮಾಡತಕ್ಕ ಯಾವುದೇ ವಸ್ತುಗಳ ಮೇಲೆ ಹಲವಾರು ಹಂತದಲ್ಲಿ ತೆರಿಗೆ ಹಾಕಿ ಸರ್ಕಾರದ ಖಜಾನೆಗೆ ಹಣವನ್ನು ತುಂಬಿಸುತ್ತೇವೆ. ಈ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡಿದ್ದೇವೆ. ಈ ತೆರಿಗೆ ಹಣದಿಂದ ಅಧಿಕಾರಿಗಳಿಗೆ ಸಂಬಳ ಕೊಡತಕ್ಕದ್ದು. ತೆರಿಗೆಯನ್ನು ಯಾವರೀತಿ ಕೊಡುತ್ತಾರೆಂದರೆ, ಉದಾಹರಣೆಗೆ ಹೇಳುವುದಾದರೆ ಒಬ್ಬ ವ್ಯಕ್ತಿ ಬೀಡಿ ಸೇದುತ್ತಾನೆ ಎಂದು ಇಟ್ಟುಕೊಳ್ಳಿ. ನಾನು ವಿವರಕ್ಕೆ ಹೋಗದೆ ಎಷ್ಟು ನೋವಿನಿಂದ ತೆರಿಗೆ ಹಣ ಶೇಖರಣೆ ಆಗುತ್ತದೆ, ಅದರಿಂದ ಸಂಬಳ ಕೊಡುತ್ತೇವೆ ಎಂಬುದನ್ನು ಹೇಳುವುದು ಇಲ್ಲಿ ಮುಖ್ಯ. ಗಣೇಶ ಬೀಡಿ ಇರಬಹುದು. ಎಂಥದ್ದೋ ಇರಬಹುದು. ಅದನ್ನು ತೆಗೆದುಕೊಂಡು ಒಂದು ಬೆಂಕಿಪೊಟ್ಟಣ ತೆಗೆದುಕೊಳ್ಳುತ್ತಾನೆ. ಒಂದು ಬೀಡಿ ಬಾಯಲ್ಲಿಟ್ಟು ಹೊಸ ಬೆಂಕಿ ಪೊಟ್ಟಣದ ಮೇಲೆ ಚೀಟಿ ಹರಿದು ಒಂದು ಕಡ್ಡಿ ಹೊಡೆದು ಬೀಡಿ ಹಚ್ಚಿದರೆ ಸರ್ಕಾರದ ಖಜಾನೆಗೆ ತೆರಿಗೆ ಕೊಡದೆ ಬೆಂಕಿ ಪೊಟ್ಟಣ ಹಚ್ಚಿದರೆ ಬೆಂಕಿಯೂ ಬೀಳುವುದಿಲ್ಲ, ಬೀಡಿಗೂ ಬೆಂಕಿ ತಗಲುವು ದಿಲ್ಲ, ಬಾಯಿಂದ ಹೊಗೆಯೂ ಬರುವುದಕ್ಕೆ ಸಾಧ್ಯವಿಲ್ಲ. ಬೆಂಕಿ ಪೊಟ್ಟಣದ ಮೇಲೆ ಎಕ್ಸೈಜ್ ಚೀಟಿ ಇರುತ್ತದೆ. ಅದನ್ನು ಹರಿದ ತಕ್ಷಣ ಸರ್ಕಾರಕ್ಕೆ ತೆರಿಗೆ ಹೋಗುತ್ತದೆ. ೪ ರೂಪಾಯಿ ಮಿಷ್ಟರ್ ಬಟ್ಟೆ ಇದ್ದರೆ ೧೫ರೂಪಾಯಿ ಸೇಲ್ಸ್ ಟ್ಯಾಕ್ಸ್ ಕೊಡುತ್ತಾರೆ, ಜನಸಾಮಾನ್ಯರು ಅವರು ಹರಿಜನರಿರಬಹುದು, ಕೂಲಿ ಮಾಡುವರಿರಬಹುದು, ಮಧ್ಯಮ ವರ್ಗದವರಿರಬಹುದು ಯಾರೇ ಇರಬಹುದು ಸೇಲ್ಸ್ ಟ್ಯಾಕ್ಸ್ ಮತ್ತು ಇತರ ಬೇರೆ ಬೇರೆ ತೆರಿಗೆಗಳನ್ನು ಜನಸಾಮಾನ್ಯರು ಕೊಡುತ್ತಾರೆ. ಅದೇರೀತಿ ತೊಗರಿ ಬೇಳೆ, ಕಿರಾಣಿ ಸಾಮಾನು ಯಾವುದೇ ಇರಬಹುದು, ಈ ರೀತಿಯಾಗಿ ವಿವಿಧ ರೂಪದಲ್ಲಿ ತೆರಿಗೆ ಯನ್ನು ಸರ್ಕಾರಿ ಖಜಾನೆಗೆ ತುಂಬುತ್ತದೆ. ಇದೇ ಹಣದಿಂದ ಸೇತುವೆಗಳನ್ನು ನಿರ್ಮಾಣ ಮಾಡುವುದಕ್ಕೆ ಆಸ್ಪತ್ರೆಯನ್ನು ಕಟ್ಟುವುದಕ್ಕೆ ಖರ್ಚು ಮಾಡುತ್ತೇವೆ. ಮತ್ತೆ ಇದೇ ಹಣದಿಂದ ಅಧಿಕಾರಿಗಳಿಗೆ ಸಂಬಳ ಕೊಡುತ್ತೇವೆ. ನಾಲ್ಕನೇ ದರ್ಜೆ ಅಧಿಕಾರಿಗಳು, ಬಾಗಿಲು ಕಾಯತಕ್ಕ ಒಬ್ಬ ನೌಕರನ ಸಂಬಳ ಕಡಿಮೆ ಇರಬಹುದು, ಮೂರನೆ ದರ್ಜೆ ನೌಕರರ ಸಂಬಳ ಅವರಿಗಿಂತ ಜಾಸ್ತಿ ಇರಬಹುದಂ, ೨ನೇ ದರ್ಜೆ ಮತ್ತು ಮೊದಲನೇ ದರ್ಜೆ ಅಧಿಕಾರಿಗಳು ಮತ್ತು ಐ. ಎ. ಎಸ್. ಮತ್ತು ಕೆ. ಎ. ಎಸ್. ಅಧಿಕಾರಿಗಳಿಗೆ ನೂರಾರು ರೂಪಾಯಿ, ಸಾವಿರಾರು ರೂಪಾಯಿಗಳನ್ನು ಕೊಡುತ್ತೇವೆ. ಕೆಲವೊಮ್ಮೆ ಕೆಲವರಿಗೆ ಕೊಡತಕ್ಕ ಸಂಬಳ ಜಾಸ್ತಿ ಇರಬಹುದು, ಕೆಲವೊಮ್ಮೆ ಕಡಿಮೆ ಇರಬಹುದು, ಬೆಂಗಳೂರು ನಗರಕ್ಕೆ ಒಬ್ಬರನ್ನು ಕಳುಹಿಸಿದರೆ ಮನೆ ಬಾಡಿಗೆ ಇತ್ಯಾದಿ ಜಾಸ್ತಿ ಆಗುತ್ತದೆ. ಕಡಿಮೆ ಮನೆ ಬಾಡಿಗೆಗೆ ಊರ ಹೊರ ವಲಯದಲ್ಲಿ ಮನೆ ಮಾಡಿದರ ಟ್ರಾನ್ಸ್‌ಪೋರ್ಟೇಷನ್ ಜಾಸ್ತಿ ಆಗುತ್ತದೆ. ಕೊಡತಕ್ಕ ಸಂಬಳ ಸಾಕಾಗುವುದಿಲ್ಲ. ಆದ್ದರಿಂದ ಸಂಬಳ ಸಾರಿಗೆಯನ್ನು ಈಗಿರುವ ಬೆಲೆ ಸೂಚ್ಯಂಕದ ಪ್ರಕಾರ ಜಾಸ್ತಿ ಮಾಡಬೇಕೆಂಬ ವಿಚಾರಧಾರೆಯನ್ನು ಇಟ್ಟುಕೊಂಡಿದ್ದೇವೆ. ಅದೇ ಕಾರಣದಿಂದ ಅಧಿಕಾರಿಗಳಿಗೆ ಲಂಚ ತಿನ್ನತಕ್ಕ ಹಕ್ಕನ್ನು ಕೊಡುವುದಕ್ಕಾಗುವುದಿಲ್ಲ. ಈ ನೀತಿಯನ್ನು ನಾವು ಇಟ್ಟು ಕೊಂಡಿದ್ದೇವೆ. ನಮ್ಮಂಥ ಸಮಾಜದಲ್ಲಿ ನಾವು ಕೊಡುವ ಸಂಬಳ ಸಾಕಾಗುತ್ತದೆ. ಮನೆ ಬಾಡಿಗೆ, ಬಂದುಹೋಗತಕ್ಕ ಖರ್ಚುಗಳು, ಮಕ್ಕಳ ವಿದ್ಯಾಭ್ಯಾಸ, ಆರೋಗ್ಯಕ್ಕೆ ಗಮನ ಇತ್ಯಾದಿ ಕನಿಷ್ಠ ಖರ್ಚುವೆಚ್ಚಗಳಿಗೆ ಲೆಕ್ಕ ಹಾಕಿದರೂ ಅಷ್ಟೆಲ್ಲಾ ಖರ್ಚು ಮಾಡಿ ೧೦ ರೂಪಾಯಿಗಳನ್ನು ಉಳಿಸತಕ್ಕ ಅಧಿಕಾರಿಗಳನ್ನೂ ನಾವು ಕಂಡಿದ್ದೇವೆ ಅದೇ ರೀತಿ ನಾಲ್ಕನೇ ದರ್ಜೆ ನೌಕರರಲ್ಲಿ ಕನಿಷ್ಠವಾಗಿ ಎಷ್ಟು ಖರ್ಚು ಮಾಡಬೇಕೋ ಅದಕ್ಕೆ ಸಾಕಾಗದೇ ಇರತಕ್ಕ ನೌಕರನನ್ನೂ ಕಂಡಿದ್ದೇವೆ. ಕೇಂದ್ರ ಸರ್ಕಾರೀ ನೌಕರರಿರಬಹುದು, ರಾಜ್ಯ ಸರ್ಕಾರಿ ನೌಕರರಿರಬಹುದು ಅಥವಾ ಖಾಸಗಿ ನೌಕರರಿರಬಹುದು ಖಾಸಗಿ ವಿಚಾರ ನಮ್ಮ ವ್ಯಾಪ್ತಿಯಲ್ಲಿ ಬರದೇ ಇರುವುದರಿಂದ ನಾನು ಮಾತನಾಡುವುದಿಲ್ಲ. ಅತೀ ಕಡಿಮೆ ಸಂಬಳ ತೆಗೆದುಕೊಂಡು ಕಷ್ಟಪಟ್ಟು ದುಡಿಯತಕ್ಕ ವರ್ಗವನ್ನು ಪ್ರತ್ಯೇಕವಾಗಿ ಇಡೋಣ. ಉಳಿದಿರತಕ್ಕ ನೌಕರಶಾಹಿ ಏನಿದೆ ೧, ೨ ಮತ್ತು ೩ನೇ ದರ್ಜೆ ನೌಕರರು ಇವರ ಬಗ್ಗೆ ನಾವು ಗಮನ

ಕೊಡದೇಹೋದರೆ ನಮ್ಮಂಥ ಸಮಾಜದಲ್ಲಿ ಜನ ಉಳಿಯುವುದಕ್ಕೆ ಆಗುವುದಿಲ್ಲ. ಅಧಿಕಾರಿಗಳಿಗೆ ಎನ್‌ಕ್ವೈರಿ ಮಾಡುವುದಕ್ಕೆ ಅಧಿಕಾರ ಕೊಡುತ್ತೇವೆ. ಯಾರಿಗೆ ಅಧಿಕಾರ ಕೊಡುತ್ತೇವೆ ಎಂಬ ಪ್ರಶ್ನೆಗೆ ನಂತರ ಬರುತ್ತೇನೆ. ಚಪ್ಪಾಳೆ ಆಗಬೇಕಾದರೆ ಎರಡು ಕೈಗಳು ಸೇರಬೇಕಾಗುತ್ತದೆ. ಸಮಾಜ ಆದಕ್ಕೆ ಗಮನ ಕೊಡಬೇಕು. ನಾವು ಗಮನ ಕೊಡಬೇಕು. ಲಂಚಗುಳಿತನ ಇವತ್ತು ವ್ಯಾಪಕವಾಗಿ ಹರಡಿದೆ. ಇದು ಇವೊತ್ತು ಇದುಹೆಚ್ಚಿದೆ ಎಂಬ ಮಾತಲ್ಲ. ಜನತಾ ಪಕ್ಷ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಮೇಲೆ ಹುಟ್ಟಿತು ಎಂದು ಹೇಳುವುದಿಲ್ಲ. ನಮ್ಮಂಥ ಸಮಾಜದಲ್ಲಿ ಲಂಚ ಇವತ್ತಿನಿಂದ ಇಲ್ಲ. ಹಿಂದೆ ಕೂಡ ಇತ್ತು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ನಿಲುವು ಪ್ರಿಯಾಂಬಲ್‌ನಲ್ಲಿದ್ದೀರಿ. ಸಬ್ಜೆಕ್ಟ್‌ಗೆ ಬನ್ನಿ.

ಶ್ರೀ ಎಸ್. ಬಂಗಾರಪ್ಪ.—ಇದು ಸೀರಿಯಸ್ ವಿಚಾರ. ಎನ್‌ಕ್ವೈರಿಗೆ ಅಧಿಕಾರ ಕೊಡುತ್ತಿದ್ದೇವೆ.

ಅಧ್ಯಕ್ಷರು.— ಅಮೆಂಡ್‌ಮೆಂಟ್‌ಗೆ ನಾರ್ಮಲ್ ಇದೆ. ನೀವು ಪಾಯಿಂಟ್‌ಗೆ ಬನ್ನಿ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿಯವರೆಗೂ ಪಾಯಿಂಟ್‌ಗೆ ಬರಲಿಲ್ಲವೆ ?

ಅಧ್ಯಕ್ಷರು.—ಇನ್ನೂ ಪ್ರಿಯಾಂಬ್‌ನಲ್ಲಿ ನಾಂದಿಯಲ್ಲಿ ಇದ್ದೀರಿ ಎಂದು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.—ವಿಷಯಕ್ಕೆ ಬರುವ ಪ್ರಯತ್ನವನ್ನು ಮಾಡುತ್ತೇನೆ. ನಮ್ಮ ಸಮಾಜದಲ್ಲಿ ಅಧಿಕಾರಿಗಳಿಗೆ ನಾವು ಏನು ಸಂಬಳವನ್ನು ಖಿರ್ಚಿಗಾಗುವಷ್ಟು ಕೊಟ್ಟಿದ್ದೇವೆ, ಎಂದು ಹೇಳುತ್ತೇವೆ, ಅವನು ತನ್ನ ಖಿರ್ಚಿಗಾಗುವಷ್ಟು ಇದ್ದರೂ ಲಂಚ ತಿನ್ನುವುದಕ್ಕೆ.....ಬೆಡ್ ಬಗ್ ಥಿಯರಿ ಎಂದು ಹೇಳುತ್ತಾರೆ. ಅಮೇರಿಕದ ಕ್ರಿಮಿನಲ್ ಲಾಯರ್ ಒಬ್ಬರು ಬೆಡ್‌ಬಗ್ ಥಿಯರಿ ಎಂದು ಹೇಳುತ್ತಾರೆ. ತಿಗಣೆ ಕೆಲಸ ಏನೆಂದರೆ ಅದು ಕಚ್ಚುತ್ತದೆ. ಹೊಟ್ಟೆ ತುಂಬುವುದಕ್ಕೆ ರಕ್ತ ಕುಡಿಯಿತು ಸಮಾಧಾನ ಮಾಡಿಕೊಳ್ಳಬಹುದು ಆದರೆ ಅದು ಕಚ್ಚಿ ರಕ್ತ ಕುಡಿಯುತ್ತದೆ. ಮತ್ತೂ ಕಚ್ಚುತ್ತದೆ. ರಕ್ತ ಕುಡಿಯುತ್ತದೆ. ನಿದ್ದೆಗಣ್ಣಿನಲ್ಲಿ ನಾವು ತಿಕ್ಕಿದಹಾಗೆ ಮಾಡುತ್ತೇವೆ. ಮತ್ತೆ ರಕ್ತ ಕುಡಿಯುತ್ತದೆ. ಅದರ ಹೊಟ್ಟೆ ಉಬ್ಬುತ್ತದೆ. ಇನ್ನೂ ರಕ್ತ ಕುಡಿಯುತ್ತದೆ ತಿಗಣೆ. ಅದೆಂ ರಕ್ತ ಕುಡಿದಷ್ಟು ಚರ್ಮ ಉಬ್ಬುತ್ತಾ ಹೋಗುತ್ತದೆ. ಆದರೆ ಹೊಟ್ಟೆ ಮಾತ್ರ ಒಡೆಯುವುದಿಲ್ಲ. ಅದರ ಚರ್ಮದ ವಿಚಾರವಾಗಿ ವಿಜ್ಞಾನಿಗಳು ಹೇಳಬೇಕು.

ಅಧ್ಯಕ್ಷರು.—ಮುಂದಿನ ವಿಷಯಕ್ಕೆ ಬನ್ನಿ.

ಶ್ರೀ ಕೆ. ಮಲ್ಲಪ್ಪ.—ತಿಗಣೆ ಹೊಟ್ಟೆ ಉಬ್ಬುತ್ತಾ ಹೋಗುತ್ತದೆ. ಮಂಗ್ಳೂರಿಗೆ ತಿರುಗಿದರೆ ಅದರ ವಿಷಯ ಏನಾಗುತ್ತದೆ?

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೆ, ವಿಷಯಕ್ಕೆ ಬನ್ನಿ ನೇರವಾಗಿ.

ಶ್ರೀ ಎಸ್. ಬಂಗಾರಪ್ಪ.—ಅಂತಹ ತಿಗಣೆಗಳು ರಕ್ತ ಕುಡಿದು ಹೊಟ್ಟೆ ಉಬ್ಬಿ ಅವುಗಳನ್ನು ಕೆಂಪಗಾಗಿರುತ್ತದೆ. ನಿದ್ರೆ ಮಾಡುವ ಸಂದರ್ಭದಲ್ಲಿ ಆರ್. ಎನ್. ನಾಯಕರಂತಹವರು ಅದರ ಮೇಲೆ ಉರುಳಿದರೆ ಹೊಟ್ಟೆ ಒಡದು ಹೋಗದಿರಬಹುದು ಆದರೆ ಮಲ್ಲಪ್ಪನವರಂತಹವರು ಹೊರಳಿಬಿದ್ದರೆ ಅದರ ಹೊಟ್ಟೆ ಒಡೆದು ಕೆಂಪು ಬಣ್ಣ ಬರುತ್ತದೆ.

ಅಧ್ಯಕ್ಷರು.—ಆ ವಿಷಯವನ್ನು ಬಿಟ್ಟು ಈಗ ತಿದ್ದುಪಡಿ ಬಗ್ಗೆ ಬನ್ನಿ.

ಶ್ರೀ ಎಸ್. ಬಂಗಾರಪ್ಪ.—ಆದುದರಿಂದ, ಈ ಲಂಚ ತಿನ್ನತಕ್ಕ ಅಧಿಕಾರಿಗಳು ಇವತ್ತು ತಿಗಣೆಗಳು ಇದ್ದಹಾಗೆ. ಆ theory ನನಗೆ ಈಗ ನೆನಪು ಬಂದಿದ್ದರಿಂದ ಇಲ್ಲಿ ಹೇಳಬೇಕಾಗಿ ಬಂತು. ಎಲ್ಲಾ ಅಧಿಕಾರಿಗಳೂ ಹೀಗೆಂದು ನಾನು ಹೇಳುವುದಿಲ್ಲ. ನಂಬಿಕಸ್ಥ, ಚೊಕ್ಕ ಅಧಿಕಾರಿಗಳು ಇದ್ದಾರೆ. ಇಂತಹವರು ಬರೀ ರಾಮಕೃಷ್ಣ ಹೆಗ್ಡೆಯವರ ಸರ್ಕಾರದಲ್ಲಿ ಮಾತ್ರ ಇದ್ದಾರೆಂದು ತಿಳಿಯಬೇಡಿ. ಕಾಂಗ್ರೆಸ್ ಸರ್ಕಾರದಲ್ಲೂ ಇದ್ದರು. ಈಗಲೂ ಇದ್ದಾರೆ.

ಅಧ್ಯಕ್ಷರು.—ತಾವು ನೇರವಾಗಿ ವಿಷಯಕ್ಕೆ ಬನ್ನಿ.

SRI S. BANGARAPPA.—I am sorry. Sir, you should support us.

ಅಧ್ಯಕ್ಷರು.—ಇದು ತಿದ್ದುಪಡಿ ಇದೆ.

ಶ್ರೀ ಎಸ್. ಬಂಗಾರಪ್ಪ.—ಇದು ಕೇವಲ ೨ ಪುಟದ್ದು ಇರಬಹುದು. ಆದರೆ ಇದರ ಆಳಕ್ಕೆ ತಾವು ಹೋಗಬೇಕು. ಈ ತಿದ್ದುಪಡಿ ಯಾವ ವಿಷಯಕ್ಕೆ ಸಂಬಂಧಪಟ್ಟಿದ್ದುದು ? ಲಂಚ ತಿನ್ನತಕ್ಕ ವಿಚಾರದಲ್ಲಿ ವಿಚಾರಣೆ ಮಾಡತಕ್ಕದ್ದು ಆಗಿದೆ. ಇವೊತ್ತು ತಮಗೆ ಗೊತ್ತಿರುವ ಹಾಗೆ ಇಂತಹ ಅಧಿಕಾರಿಗಳು ಹಿಂದೆಯೂ ಇದ್ದರು, ಈಗಲೂ ಇದ್ದಾರೆ, ಮುಂದೆಯೂ ಇರುತ್ತಾರೆ. ಆದರೆ ಇವೊತ್ತು ಲಂಚಗುಳಿತನಕ್ಕೆ ಒಳಗಾಗಿರತಕ್ಕಂತಹ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿದೆ. ಜನತಾ ಪಕ್ಷ ಅಧಿಕಾರಕ್ಕೆ ಬಂದರೆ ಲಂಚಗುಳಿತನ, ಸ್ವಜನಪಕ್ಷಪಾತ ಇತ್ಯಾದಿ ಇಲ್ಲದೇ ಇರತಕ್ಕ ಸರ್ಕಾರ ಸ್ಥಾಪನೆ ಮಾಡುತ್ತೇವೆಂದು ಪ್ರಣಾಳಿಕೆಯಲ್ಲಿ ಹೇಳಿದ್ದರು. ಇವೊತ್ತು ತಮ್ಮ ಮುಖಾಂತರ ಕೇಳುತ್ತೇನೆ. ಲಂಚಗುಳಿತನ ಶೇಕಡ ಅಲ್ಪಸ್ವಲ್ಪವಾದರೂ ಕಡಿಮೆಯಾಗಿಯೇ ? ಇದರ ನಿರ್ಮೂಲನ ಇರಲಿ, ಸೆಕ್ರೆಟೇರಿಯೇಟ್ ಲೆವೆಲ್‌ನಿಂದ ಹಿಡಿದು ಗ್ರಾಮಲೆಕ್ಕಿಗನವರೆಗೂ ಲಂಚ ಇದೆ. ಇಂತಹ ಅಧಿಕಾರಿಗಳ ವಿಚಾರಣೆಯಾಗಬೇಕು ಹಾಗೂ ಶಿಕ್ಷೆಯಾಗಬೇಕು. ಈ ಬಗ್ಗೆ ಲೋಕಾಯುಕ್ತ ಹಾಗೂ ಉಪಲೋಕಾಯುಕ್ತರಿಗೆ ಅಧಿಕಾರ ಕೊಡುವುದರ ಮೂಲಕ ಕಾನೂನು ತಂದಿದೆ. ಇವೊತ್ತು ಈ ತಿದ್ದುಪಡಿ ಮಸೂದೆಯನ್ನು ನೋಡಿದರೆ ಗೊತ್ತಾಗುತ್ತದೆ. ಇಲ್ಲಿ ಬರೀ ಲೋಕಾಯುಕ್ತ ಮತ್ತು ಉಪಲೋಕಾಯುಕ್ತರಿಗೆ ಅಧಿಕಾರವನ್ನು ಕೊಡುವುದಿಲ್ಲ. ಆಫೀಸರ್ಸ್, ಸ್ಟಾಫ್ ಆಫ್ ಲೋಕಾಯುಕ್ತರಿಗೆ ಈ ಅಧಿಕಾರ ಏಕೆ ಕೊಡಬೇಕು ಸ್ವಾಮಿ ? ಟೆಕ್ನಿಕಲ್ ವಿಷಯ ಬಂದಾಗ, ಸಿವಿಲ್ ವರ್ಕ್ಸ್ ಬಗ್ಗೆ, ಮರಳಿನ ಬಗ್ಗೆ, ದೋಷ ಪೂರ್ಣ ವಸ್ತುಗಳ ಬಗ್ಗೆ ಒಬ್ಬ ಎಂಜಿನಿಯರ್‌ಗೆ ಅಧಿಕಾರ ಕೊಡಬೇಕಾಗುತ್ತದೆ. ಇವತ್ತು ಲಂಚ ತೆಗೆದುಕೊಳ್ಳುವುದಕ್ಕೆ ಹೆಸರುವಾಸಿಯಾಗಿರತಕ್ಕ ಅಧಿಕಾರಿಗಳನ್ನು ನಾವು ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ಕೈಕೆಳಗೆ ಕೊಟ್ಟರೆ ಯಾವ ರೀತಿ ವಿಚಾರಣೆಯನ್ನು ಮಾಡಲು ಆಗುತ್ತದೆ ? ಲಂಚ ತಿನ್ನತಕ್ಕ ಜನರನ್ನು ಅಲ್ಲಿ ಹಾಕಿದರೆ ಇನ್ನು ಯಾವ ರೀತಿ ಲಂಚ ತಿನ್ನತಕ್ಕ ಅಧಿಕಾರಿಗಳ ಮೇಲೆ ಇವರು ವಿಚಾರ ಮಾಡತಕ್ಕ ಹಕ್ಕು ಬರುತ್ತದೆ ? ನಾವು ಆತ್ಮ ವಂಚನೆ ಮಾಡುವುದಕ್ಕೆ ಹೋಗ ಬಾರದು. ನನಗೆ ಅಧಿಕಾರ ಕೊಟ್ಟಿದ್ದಾರೆ. ನಾನು ಒಳ್ಳೆಯ ಕೆಲಸ ಮಾಡಬೇಕೆಂಬ ಭಾವನೆ ಬರಬೇಕು. ಚಾರ್ಜ್ ಶೀಟ್ ಹಾಕಿದ ತಕ್ಷಣ ಅದು ಜಡ್ಜ್‌ಮೆಂಟ್ ಆಗುವುದಿಲ್ಲ. ಅಲ್ಲಿಯ ಆಪಾದನೆಗಳು ಸರಿಯೇ ? ವಾಸ್ತವಾಂಶ ಇದೆಯೇ ಎಂಬುದೆಲ್ಲಾ ವಿಚಾರಣೆಯಾಗಬೇಕು. ಇದನ್ನೆಲ್ಲಾ ಮಾಡತಕ್ಕ ವ್ಯಕ್ತಿ ಲಂಚ ತಿನ್ನತಕ್ಕ ವ್ಯಕ್ತಿಯಾದರೆ ಬೇಲಿಯೇ ಎದ್ದು ಹೊಲ ಮೇದಂತೆ ಆ ಅಧಿಕಾರಿ ಕೈಲಿ ಅಧಿಕಾರಿ ಕೊಟ್ಟರೆ ಏನಾಗುತ್ತದೆ ಎಂಬುದನ್ನು ತಾವು ವಿಚಾರ ಮಾಡಬೇಕು. ವಿಜಿಲೆನ್ಸ್‌ನಲ್ಲಿನ ಅಧಿಕಾರಿಗಳ ವಿಷಯ ನಮಗೆ ತಿಳಿದಿದೆ. ಹಿಂದೆ ಯಾವ ಅಧಿಕಾರಿಗಳ ಮೇಲೆ ಚಾರ್ಜ್ ಶೀಟ್ ಇತ್ತು ಅಂತಹವರನ್ನೇ ವಿಜಿಲೆನ್ಸ್ ಕಮಿಷನ್ ನೇಮಕ ಮಾಡಿದ್ದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ತಿದ್ದುಪಡಿ ಮಸೂದೆಯಲ್ಲಿ ಜಾಗೃತ ಆಯೋಗದಲ್ಲಿ ಇದ್ದ ಅಧಿಕಾರಿಗಳನ್ನೇ ಮತ್ತು ಲೋಕಾಯುಕ್ತರಿಗೆ ಕೊಡುತ್ತಿದ್ದೀರಿ. ಇವತ್ತು ಒಬ್ಬ ಪೋಲೀಸ್ ಅಧಿಕಾರಿ ಮೇಲೆ ವಿಚಾರಣೆಯಾಗಬೇಕಾಗುತ್ತದೆ. ನಾಳೆ ದಿವಸ ನಾವು ಸರ್ಕಲ್ ಇನ್ಸ್‌ಪೆಕ್ಟರ್, ಡಿ.ವೈ.ಎಸ್.ಪಿ., ಪೋಲೀಸು ಸೂಪರಿಂಟೆಂಡೆಂಟ್, ಅಥವಾ ಡಿ.ಐ.ಜಿ. ಯವರ ಮೇಲೆ ಆರ್ಜಿ ಕೊಡುತ್ತೇವೆಂದು ಇಟ್ಟುಕೊಳ್ಳಿ. ಅಥವಾ ನಾಳೆ ಸಾರ್ವಜನಿಕರು ಇಂತಹವರ ಮೇಲೆ ದೂರು ಕೊಡುತ್ತಾರೆ ಹಾಗೂ ಆರ್ಜಿ ಹಾಕುತ್ತಾರೆ. ಅದನ್ನು ನಾಳೆ ವಿಚಾರಣೆ ಮಾಡ ಬೇಕಾಗುತ್ತದೆ. ಲಂಚ ತಿನ್ನತಕ್ಕದ್ದರಲ್ಲಿ ಪರಿಣಿತರಾಗಿರುವವರೇ ನಾಳೆ ವಿಚಾರಣೆ ಮಾಡುವುದಕ್ಕೆ ಹೊರಟರೆ ನಾಳೆ ಗತಿ ಏನಾಗುತ್ತದೆ ? ನೀವು ಆ ಜಾಗಕ್ಕೆ ನೇಮಕ ಮಾಡುವಾಗ, ಅವರ ಚರಿತ್ರೆ ಚೊಕ್ಕವಾಗಿರಬೇಕು. ಅವರನ್ನು ನೋಡಿದರೆ ಗೌರವ ಬರುವಂತಿರಬೇಕು. ನಾನು ಕೆಲವು ಒಳ್ಳೆಯ ಅಧಿಕಾರಿಗಳನ್ನು ನೋಡಿದ್ದೇನೆ. ಅವರನ್ನು ನೋಡಲು ನನಗೆ ಸಂತೋಷವಾಗುತ್ತದೆ. ಅಂತಹ ಅಧಿಕಾರಿಗಳ ಬಗ್ಗೆ ಹೇಳುವುದಕ್ಕೆ ನನಗೂ ಸಂತೋಷವಾಗುತ್ತದೆ. ಸರ್ಕಾರ ಇನ್ನೂ ಅಂತಹ ಅಧಿಕಾರಿಗಳನ್ನು ಹೊಂದಿದೆ ಎಂದು ಹೇಳುವುದಕ್ಕೆ ಸಂತೋಷಪಡುತ್ತೇನೆ. ಆದರೆ ಅಷ್ಟೇ ಕಠಿಣವಾಗಿ ನೋಡತಕ್ಕ, ಕೆಟ್ಟ ದುರಾಡಳಿತ ಮಾಡತಕ್ಕ, ಸ್ವಜನಪಕ್ಷಪಾತ ಮಾಡತಕ್ಕ, ಲಂಚ ತಿನ್ನತಕ್ಕದ್ದರಲ್ಲಿ ಹೆಸರುವಾಸಿಯಾಗಿರತಕ್ಕ ಅಧಿಕಾರಿಗಳನ್ನೂ ನಾನು ನೋಡಿದ್ದೇನೆ. ಈ ವಿಷಯದಲ್ಲಿ ಸರ್ಕಾರ ಹೇಗೆ ಇರಬೇಕು ಗೊತ್ತೇ ? ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ಮುಖಾಂತರ ಸರ್ಕಾರ ಶ್ರೀರಾಮ ಇದ್ದ ಹಾಗೆ ಇರಬೇಕು. ಗುಂಡಪ್ಪನವರು ಒಂದು ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ. ಜಂಟಲ್‌ಮನ್ ಎನ್ನುವ ಪದಕ್ಕೆ ಕನ್ನಡ ಅರ್ಥವನ್ನು ಹುಡುಕುತ್ತಾ ಹೋಗಿ ಸಭ್ಯಸ್ಥ, ಸದ್‌ಗೃಹಸ್ಥ ಎಂಬ ಪದಗಳು ಅಲ್ಲಿ ಕೇಳಿಬರುತ್ತವೆ, ಆದರೆ ಇವುಗಳ ಬಗ್ಗೆಯೂ ತಾರತಮ್ಯ ಬಂದು ಕೊನೆಗೆ ವಿವರಣೆ ಕೊಡುವುದಕ್ಕೆ ಆಗುವುದಿಲ್ಲ. ಕೊನೆಗೆ ''ಶ್ರೀರಾಮ'' ಎಂದು ಕೊಟ್ಟರೆ ಅದು ಬೆಸ್ಟ್ ಆಗುತ್ತದೆ ಎಂದು ಹೇಳಿ ಉದಾಹರಣೆ ಕೊಡುತ್ತಾರೆ. ಏಕೆಂದರೆ, ಶ್ರೀರಾಮ ರಾವಣನ ವಧೆ ಮಾಡಬೇಕಾದರೆ ಎಷ್ಟು ಕಠಿಣನಾಗಿರುತ್ತಾನೋ ಅಷ್ಟೇ ಸೌಮ್ಯತೆಯನ್ನು ಶಾಂತತೆಯನ್ನು ಅಗ್ನಿಪರೀಕ್ಷೆಯಿಂದ ಹೊರ ಬಂದ ಸೀತಾವಾಮಾತೆಯನ್ನು ಸ್ವೀಕರಿಸುವ ಸಮಯದಲ್ಲಿ ಹೊಂದಿರುತ್ತಾನೆ. ಲೋಕಾಯುಕ್ತ ಹಾಗೂ

ಉಪಲೋಕಾಯುಕ್ತರ ಮತ್ತು ಸರ್ಕಾರದ ಸಂಬಂಧ ಈ ರೀತಿ ಇರಬೇಕು. ಯಾರು ಯಾರು ತಪ್ಪು ಮಾಡಿರುತ್ತಾರೆ ಅವರನ್ನು ಶಿಕ್ಷೆ ಮಾಡತಕ್ಕ ಕಠಿಣ್ಯ ಮನೋಭಾವನೆ ಇಲ್ಲಿ ಆಗತ್ಯ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ರಾಮರಾಜ್ಯ ಎಂದು ಅವರು ಹೇಳಿಕೊಳ್ಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಇದು ರಾಮರಾಜ್ಯವೇನೋ ಹೌದು. ರಾವಣನ ಬದಲು ಅಲ್ಲಿ ಮತ್ತೊಬ್ಬನನ್ನು ಸೇರಿಸೋಣ. ಈ ರೀತಿ ನಾನು ಪೂರ್ವಪೀಠಿಕೆಯಾಗಿ ಇದನ್ನು ಇಟ್ಟೆ. ಅವರಿಗೆ ಅಧಿಕಾರವನ್ನು ಕೊಡೋಣ. ಕಾರಣ, ಬೇರೆ ದಾರಿಯೇ ಇಲ್ಲ. ನಾನು ಮೊದಲ ಸಲ ಶಾಸನಸಭೆಗೆ ಬಂದಾಗ ಲಂಚ ನಿಲ್ಲಿಸುವುದಕ್ಕೆ ಏನಾದರೂ ಮಾಡಬೇಕೆಂದು ಹೇಳಿದೆ. ನಾವು ಜನರೆಲ್ಲಾ ಸೇರಿ ಈ ಬಗ್ಗೆ ಏನು ಮಾಡಬೇಕು ? ನಾನು ಹೇಳುವುದೂ ಕೂಡಾ ಸರಿ ಎಂದು ಅಲ್ಲ. ಏನಾದರೂ ಒಂದು ನಾವು ಮಾಡಬೇಕು. ಬೆಳಗಾಗುವುದರೊಳಗೆ ಲಂಚ ನಿಲ್ಲಿಸಬೇಕೆಂಬ ಆಸೆ. ಲಂಚವನ್ನು ಕೇಳಿದ ಮೇಲೆ ಅದನ್ನು ಕೊಡುವುದಕ್ಕೆ ಒಬ್ಬ ವ್ಯಕ್ತಿ ಇರಲೇಬೇಕಲ್ಲವೇ ? ಇವೊತ್ತು ಲಂಚವನ್ನು ಕೊಟ್ಟು ಆತ ಲಂಚ ತಿನ್ನುವ ನೌಕರನನ್ನಾಗಿ ನಿರ್ಮಾಣ ಮಾಡಿದಂತಹ ವ್ಯಕ್ತಿಗೂ ಬಲಿ ಹಾಕಬೇಕು. ಇಲ್ಲದೇ ಹೋದರೆ ಬೇರೆ ದಾರಿ ನಮಗೆ ಉಳಿದಿಲ್ಲ. ಆದರೆ ನಾವು

೧೧-೩೦ ಎ.ಎಂ

ಏನು ಮಾಡಬೇಕು ? ಲಂಚವನ್ನು ಕೇಳತಕ್ಕ ಅಧಿಕಾರಿಗಳೇ ಬಹಳ ಪ್ರಮಾಣದಲ್ಲಿರುವುದರಿಂದ ಯಾರು ಲಂಚವನ್ನು ನಿರೀಕ್ಷಣೆ ಮಾಡುತ್ತಾರೆ ಅವರನ್ನೇ ಇದಕ್ಕೆ ಅಧಿಕಾರಿಯನ್ನಾಗಿ ಮಾಡಿದರೆ ಲಂಚವನ್ನು ಕೊಡತಕ್ಕವನ ಮೇಲೆ ಛಾರ್ಜ್‌ಷೀಟ್ ಹಾಕಬೇಕಾಗುತ್ತದೆ. ಆದರೆ ಇಲ್ಲಿ ದುರುಪಯೋಗವಾಗುತ್ತದೆ. ಸಾರ್ವಜನಿಕರು ಇದನ್ನು ಬಹಳ ಜವಾಬ್ದಾರಿಯಿಂದ ಯೋಚನೆ ಮಾಡಬೇಕಾಗುತ್ತದೆ "Trial and Error Method" ತಾವೂ ಇದನ್ನು ಒಪ್ಪುತ್ತೀರಿ. ನಾವು ಒಳ್ಳೊಳ್ಳೆಯ ಮಾತನ್ನು ಹೇಳುತ್ತೇವೆ. ಜನತಾ ಪಕ್ಷದವರು ಏನೇನೋ ಹೇಳಿಕೊಂಡು ಅಧಿಕಾರಕ್ಕೆ ಬಂದರು. ನಾವು ಲಂಚಗುಳಿತನವನ್ನು ನಿರ್ಮೂಲ ಮಾಡುತ್ತೇವೆಂದು ನೀವು ಎಲ್ಲೂ ಹೇಳಿಲ್ಲ. ಲಂಚವನ್ನು ಕಾರ್ಯತಃ ನಿರ್ಮೂಲ ಮಾಡಲು ಸಾಧನೆ ಮಾಡುತ್ತೇವೆ, ಒಂದು ವೇಳೆ ಇದನ್ನು ನಿರ್ಮೂಲ ಮಾಡಲು ಆಗದಿದ್ದರೆ ನಾವು ಈ ಅಧಿಕಾರದಲ್ಲಿರುವುದಿಲ್ಲ ಎನ್ನತಕ್ಕ ಮಾತನ್ನು ನೀವು ಹೇಳಬೇಕು. ನೀವು ಫುಲ್ ಟಮ್ರ್ ಇರುವುದಾದರೆ ಇರಿ ಸಂತೋಷ ನಾನು ಬೇಡವೆಂದು ಹೇಳುವುದಿಲ್ಲ. ನೀವು ಜನರನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಜನರ ಹಿತರಕ್ಷಣೆ ಕಾಪಾಡಬೇಕೆಂದು ಎಲ್ಲಿಯವರೆಗೆ ಮನಸ್ಸು ಮಾಡುವುದಿಲ್ಲ, ಆ ಭಾವನೆ ನಿಮ್ಮ ಮನಸ್ಸಿನಲ್ಲಿ ಬರುವುದಿಲ್ಲ ಅಲ್ಲಿಯವರೆಗೆ ನೀವು ರೇಡಿಯೋದಲ್ಲಾಗಲಿ, ದೂರದರ್ಶನದಲ್ಲಾಗಲಿ ಅಥವಾ ಬೇರೆ ಯಾವುದೇ ರೀತಿಯಲ್ಲಾಗಲಿ ಎಷ್ಟೇ ಜಾಹಿರಾತನ್ನು ನೀಡಿದರೂ ಏನೂ ಪ್ರಯೋಜನವಾಗುವುದಿಲ್ಲ. ಎಂಥ ಕಾನೂನನ್ನು ಮಾಡಿದರೂ ಆದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ಬಗ್ಗೆ ಕಾನೂನನ್ನು ಮಾಡಿದರೆ ಎಲ್ಲಾ ಸರಿ ಹೋಗುತ್ತದೆಂದು ನೀವು ತಿಳಿದುಕೊಂಡಿದ್ದೀರಿ. ಲೋಕಾಯುಕ್ತ ಉಪಲೋಕಾಯುಕ್ತಕ್ಕೆ ಈ ಕಾನೂನನ್ನು ಮಾಡಿಕೊಟ್ಟರೆ ಇನ್ನು ಮುಂದೆ ಈ ಲಂಚಗುಳಿತನ ನಿಲ್ಲುತ್ತದೆಂದು ಜನರು ತಿಳಿದುಕೊಂಡಿಲ್ಲ. ಜನರು ಅಷ್ಟೊಂದು ಮೂರ್ಖರೇನೂ ಅಲ್ಲ. ಅವರು ನಿಮಗಿಂತಲೂ ವಿಚಾರವನ್ನು ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಒಳ್ಳೆಯ ಆಡಳಿತವನ್ನು ಮಾಡಿ ಎಂದು ಜನರು ನಿಮಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಲಂಚಗುಳಿತನವನ್ನು ನೀವು ನಿಲ್ಲಿಸಬೇಕು. ಸೆಕ್ರೆಟರಿಯೇಟ್ ಮಟ್ಟದಿಂದ, ಮಂತ್ರಿಗಳ ಮಟ್ಟದಿಂದ ಈ ಒಂದು ವಿಚಾರಧಾರೆ ಎಲ್ಲಿಯವರೆಗೆ ಹೊರಡುವುದಿಲ್ಲ ಅಲ್ಲಿಯವರೆಗೂ ಈ ಲಂಚಗುಳಿತನ ಎಂಬುದು ನಿಲ್ಲುವುದಿಲ್ಲವೆಂದು ಹೇಳ ಬಯಸುತ್ತೇನೆ. ಇಷ್ಟರಲ್ಲಿ ಅಂತಿಮವಾಗಿ ಪರಿಣಾಮ ಏನಾಗಬಹುದೆಂಬ ಕೆಲವು ಅನುಮಾನಗಳು ನಮಗೆ ಇವೆ ಎನ್ನತಕ್ಕ ಮಾತನ್ನು ಹೇಳಿ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಕೊನೆಯಲ್ಲಿ ತಾವು ಹೇಳಿದ್ದು ಬಹಳ ಚೆನ್ನಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ವಿಷದೀಕರಿಸಿದ ವಿಷಯ ಲಂಚಗುಳಿತನಕ್ಕೆ ಸಂಬಂಧಪಟ್ಟಿದ್ದು ಅಧಿಕಾರಿಗಳಲ್ಲಿ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಕೆಟ್ಟ ಅಧಿಕಾರಿಗಳಿಗೆ ಈ

ಲಂಚವನ್ನು ನಿರ್ಮೂಲ ಮಾಡತಕ್ಕ ಕೆಲಸವನ್ನು ಕೊಡುವುದು ಒಳ್ಳೆಯದು ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಲಂಚಗುಳಿತನ ನಡೆದಿರುವುದು ಸಾಬೀತು ಆಗುವವರೆಗೂ ನಮ್ಮ ದೇಶದ ಕಾನೂನು ಪ್ರಕಾರ ಅವನು ಲಂಚಕೋರ ಎಂದು ಹೇಳುವುದಕ್ಕಾಗುವುದಿಲ್ಲ. ಈ ಲಂಚಗುಳಿತನ ಯಾವಾಗ ಬಂತು ? ಹೇಗೆ ಬಂತು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ನಾನು ಚರಿತ್ರೆಯನ್ನು ಓದಿದ್ದೇನೆ. ಮಾನ್ಯ ಬಂಗಾರಪ್ಪನವರು ರಾಮಾಯಣದಲ್ಲಿ ರಾಮನ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ರಾಮಾಯಣವನ್ನು ಕನ್ನಡದಲ್ಲೂ ಓದುತ್ತಿದ್ದೇನೆ. ಆದರಲ್ಲಿ ಎಲ್ಲಿಯೂ ಕೂಡ ಲಂಚದ ವಿಚಾರವೇ ಬರುವುದಿಲ್ಲ. ನಾನು ಯಾರನ್ನೂ ಟೀಕೆ ಮಾಡುತ್ತಿಲ್ಲ. ಮಹಾಭಾರತದಲ್ಲಿ ಸ್ವಲ್ಪ ಹೆಚ್ಚೂ ಕಡಿಮೆ ಇಂಥ ಒಂದು ಪ್ರಸಂಗ ಸಿಕ್ಕುತ್ತದೆ. ಆದರೆ ಕೆಲವರು ತಮ್ಮ ಅಭಿಪ್ರಾಯವನ್ನು ಇವರ ಬಗ್ಗೆ ವ್ಯಕ್ತಪಡಿಸುವಾಗ ಈ ಲಂಚ ಎಂಬುದು ಭ್ರಷ್ಟಾಚಾರದ ಕೊನೆ ಹಂತ, ಇದು ಮೂರನೆಯ ಹಂತ ಎಂದು ಹೇಳಿದ್ದಾರೆ. ಈ ೩ ಹಂತಗಳು ಯಾವುವು ಎಂದರೆ ಮೊದಲನೆಯದು ''ಮರ್ಯಾದೆ'', ಎರಡನೆಯದು ''ಪಾಪಮೂಲು'', ಮತ್ತು ಮೂರನೆಯದು ''ಲಂಚ'' ''ಮರ್ಯಾದೆ ಎಂದರೆ ಮಾನ್ಯ ಬಂಗಾರಪ್ಪನವರಂಥವರು ಹಿರಿಯ ರಾಜಕಾರಣಿಗಳಾದವರು ಬಂದರು ಅವರ ಕೆಲಸವನ್ನು ಮೊದಲು ಮಾಡಿಕೊಡಿ ಎಂಬುದು.....

ಶ್ರೀ ಎಸ್. ಬಂಗಾರಪ್ಪ.—ನಾನು ಮಧ್ಯೆ ಮಾತನಾಡುವುದಕ್ಕೆ ಕ್ಷಮಿಸಬೇಕು. ಕೆಲವು ಕಡೆ ಇವರು ನಮ್ಮ ಕೆಲಸವನ್ನು ಮಾಡಿಕೊಟ್ಟಿದ್ದಾರೆ ಆದ್ದರಿಂದ ಅವರಿಗೆ ಏನಾದರೂ ಕೊಡಿ ಎಂದು ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ದಯವಿಟ್ಟು ಕೇಳಿ. ಇದು ಮರ್ಯಾದೆ, ಊರಿನ ದೊಡ್ಡ ಮನುಷ್ಯರು ಬಂದರು, ಊರಿನ ಹಿರಿಯ ವ್ಯಕ್ತಿ, ಅವರು ಯಾವತ್ತೂ ಇಲ್ಲಿಗೆ ಬಂದವರಲ್ಲ ಆದ್ದರಿಂದ ಅವರ ಕೆಲಸವನ್ನು ಮೊದಲು ಮಾಡಿಕೊಡಿ ಎಂದು ಹೇಳುವುದು ಇದು ಮೊದಲನೇಯ ಭಾಗ.

ಇನ್ನು ಎರಡನೆಯದು ಎಂದರೆ ''ಪಾಪಮೂಲು''. ಅವರು ಏನೋ ಕೆಲಸಮಾಡಿ ಕೊಡುತ್ತಾರೆ ಅದಕ್ಕೋಸ್ಕರ ಅವರಿಗೆ ಏನಾದರೂ ಒಂದನ್ನು ಕೊಡುವುದು. ಉದಾಹರಣೆಗೆ ಗಾರಿ ಹಬ್ಬಕ್ಕೆ ತೆಂಗಿನ ಕಾಯಿ ಕೊಡುವುದು, ಬಾಳೆಗೊನೆ ಕೊಡುವುದು, ಸೀರೆ ರವಿಕೆ ಕೊಡುವುದು. ಅಥವಾ ಇನ್ನೂ ಏನಾದರೂ ಕೊಡುವುದು. ಅಂದರೆ ಅವರವರು ಏನೇನು ಕಸಬುಗಳನ್ನು ಮಾಡುತ್ತಿರುತ್ತಾರೆ, ಆ ಉತ್ಪನ್ನದ ವಸ್ತುವನ್ನು ಕೊಟ್ಟರೆ ಅದು ಪಾಪಮೂಲು.

ಇನ್ನು ಮೂರನೆಯದು ಎಂದರೆ ''ಲಂಚ'' ನಾನು ನಿಮ್ಮ ಕೆಲಸವನ್ನು ಮಾಡಿ ಕೊಡುತ್ತೇನೆ. ಅದಕ್ಕೆ ಇಷ್ಟು ದುಡ್ಡು ಕೊಡಿ ಎಂದು ಕೇಳುವುದು ಅಥವಾ ಇಷ್ಟು ದುಡ್ಡನ್ನು ಕೊಟ್ಟು ನಿಮ್ಮ ಕೆಲಸವನ್ನು ಮಾಡಿಸಿಕೊಂಡು ಹೋಗಿ ಎಂದು ಹೇಳುವುದು. ಈ ಸಂದರ್ಭದಲ್ಲಿ ಕೌಟಿಲ್ಯನು ಕೊಟ್ಟಿರುವ ಒಂದು ಉದಾಹರಣೆ ನನ್ನ ನೆನಪಿಗೆ ಬರುತ್ತದೆ. ಅವನು ಏನು ಹೇಳಿದ್ದಾನೆಂದರೆ, ಒಂದು ಮರದ ಪೊಟರೆಯಲ್ಲಿ ಬಹಳ ದೊಡ್ಡ ಜೇನು ಕಟ್ಟಿತ್ತು.....

ಶ್ರೀ ಆರ್.ಎನ್. ನಾಯಕ್.—ನೀವು ಈ ಕಥೆಯನ್ನು ಮೂರನೆಯ ಸಾರಿ ಈ ಸದನದಲ್ಲಿ ಹೇಳುತ್ತಿರುವುದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ನಾಯಕ್‌ರವರಲ್ಲಿ ನಾನು ಒಂದು ಮನವಿಯನ್ನು ಮಾನ್ಯ ಅಧ್ಯಕ್ಷರ ಮೂಲಕ ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರಿಗೆ ತಿಳುವಳಿಕೆ ಹೇಳುವಷ್ಟು ಬುದ್ಧಿವಂತಿಕೆ ನನಗೆ ಇಲ್ಲ. ನಾನು ಕಲಿಯುವವನು ಸಾಯುವವರೆಗೂ ನೀನು ಕಲಿಯುತ್ತಿರಬೇಕೆಂದು ನನಗೆ ಶಾಪ ಬಂದಿದೆ. ಆದ್ದರಿಂದ ನಾನು ಹೇಳುತ್ತಿದ್ದೇನೆ, ನಾನು ಇನ್ನೂ ಕಲಿಯುತ್ತಿರುವವನು.....

ಆರ್.ಎನ್. ನಾಯಕ್.—ಮಾನ್ಯ ಲಕ್ಷ್ಮೀಸಾಗರ್‌ರವರು ಮರೆತಿರಬಹುದು. ನಾನು ಅವರ ಶಿಷ್ಯ ಅವರು ರೇಣುಕಾಚಾರ್ಯ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದಾಗ ಅವರಿಂದ ನಾನು ಬಹಳ ವಿಷಯವನ್ನು ಕಲಿತಿದ್ದೇನೆ. ಅವರು ನನಗೆ ಗುರುಗಳು.....

ಶ್ರೀ ಜಿ. ನಾರಾಯಣಕುಮಾರ್.—ಈಗ ಗುರುವಿಗೇ ತಿರುಮಂತ್ರವೇ ?

ಶ್ರೀ ಎ. ಲಕ್ಷ್ಮೀಸಾಗರ್.—ನನ್ನಿಂದ ಅವರು ಒಳ್ಳೆಯದನ್ನು ಕಲಿತಿದ್ದರೆ ಅವರಿಗೆ ಇನ್ನೂ ಒಳ್ಳೆಯ ಹೆಸರು ಬರಲಿ. ಎರಡನೆಯದಾಗಿ, ಅವರು ನನಗಿಂತ ಹೆಚ್ಚಿನ ವಿಷಯ ಸಂಗ್ರಹಣೆ ಮಾಡಿ ತಿಳಿದುಕೊಂಡಿದ್ದರೆ ಅದನ್ನು ಅವರು ಬೇರೆಯವರಿಗೆ ತಿಳಿಯುವಂತೆ ಹೇಳುವ ಕಲೆ ಚೆನ್ನಾಗಿ ತಿಳಿದಿರಬಹುದು.

ಶ್ರೀ ಆರ್.ಎನ್ ನಾಯಕ್.—ನಿಮ್ಮ ದೊಡ್ಡ ಆಶೀರ್ವಾದ ನನಗೆ ಯಾವಾಗಲೂ ಇರಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ತೆಲುಗಿನಲ್ಲಿ ಒಂದು ಗಾದೆಯ ಮಾತು ಇದೆ. ಅದು ''ಗುರುವನು ಮಿಂಚಿನ ಶಿಷ್ಯುಡು'' ಎಂದು. ಅದೇ ರೀತಿ ಇನ್ನೂ ಒಂದು ಗಾದೆ ಇದೆ. ಅದು ''ಗುರುವನು ಮುಂಚಿನ ಶಿಷ್ಯುಡು'' ಎಂದು. ಅಂದರೆ ''ಗುರುವನ್ನೇ ಮುಳುಗಿಸಿದ ಶಿಷ್ಯ'' ಎಂದು.

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ನಾನೂ ಕೂಡ ಮಾನ್ಯ ಲಕ್ಷ್ಮೀಸಾಗರ್‌ರವರ ಶಿಷ್ಯ. ಹಾಗಾದರೆ ನಾನು ಯಾವ ಕೆಟೆಗರಿಗೆ ಸೇರುತ್ತೇನೆಯೋ ಗೊತ್ತಿಲ್ಲ. ಏಕೆಂದರೆ ನಾನೂ ಕೂಡ ಅವರ ಶಿಷ್ಯನಾಗಿದ್ದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ನಾನು ಸಮಯ ಬಂದಾಗ ಅವರ ವಿಷಯವನ್ನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಕೆಲವೊಂದು ದೃಷ್ಟಿಯಿಂದ ಅವರು ನಿಮ್ಮನ್ನು ಮೀರಿಸಿದ್ದಾರೆ. ಅಂದರೆ ಗುರುಗಳನ್ನೇ ಮೀರಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹಾಗಾದರೆ ಅಪರನ್ನು ಮುಳುಗಿಸುವ ಶಿಷ್ಯ ಆ ಕಡೆಯೇ ಇದ್ದಾರೆ ಅನ್ನಿ. ಅತ್ಯಂತ ಹಿಂದಿನ ಕಾಲದ್ದು. ರಾಜ್ಯದ ಪರಿಸ್ಥಿತಿಯನ್ನು ಕುರಿತು ನಮಗೆ ಕೈಗೆ ಸಿಕ್ಕಿರತಕ್ಕಂಥ ಗ್ರಂಥ. ರಾಜ್ಯ ಹೇಗೆ ನಡೆಯಬೇಕೆಂಬುದರ ಬಗ್ಗೆ ಹೇಳತಕ್ಕಂಥ ಗ್ರಂಥಗಳು ರಾಮಾಯಣ, ಮಹಾಭಾರತವನ್ನು ಬಿಟ್ಟರೆ ನಮಗೆ ಸಿಕ್ಕಿರತಕ್ಕಂಥ ಗ್ರಂಥ ಇದಾಗಿದೆ. ಈ ಸಂದರ್ಭದಲ್ಲಿ ಚಾಣಕ್ಯರನ್ನು ಸಾಮಾನ್ಯವಾಗಿ ಜ್ಞಾಪಿಸಿಕೊಳ್ಳತಕ್ಕಂಥದ್ದು ಬಹಳ ಮುಖ್ಯ. ಚಾಣಕ್ಯರು ಒಮ್ಮೆ ಎಲ್ಲಿಯೋ ಹೋಗುತ್ತಿರಬೇಕಾದರೆ ಒಂದು ಮರದ ಪೊಟರೆಯಲ್ಲಿ ಜೇನು ಕಟ್ಟಿರತಕ್ಕಂಥದ್ದನ್ನು ನೋಡುತ್ತಾರೆ. ಕೊಡಲಿ, ಕೊಡತಿ ಇದೆಲ್ಲ ತೆಗೆದುಕೊಂಡು ಬಂದು ಮರವನ್ನು ಕಡಿದರೆ ಜೇನು ಪೂರ್ತಾಗುತ್ತದೆಂದು ತಿಳಿದು ಜೇನಿನ ಗೂಡಿಗೆ ತಮ್ಮ ಕೈಯನ್ನು ತೂರಿಸಿ ಜೇನನ್ನು ತೆಗೆಯಲು ಪ್ರಯತ್ನಿಸುತ್ತಾರೆ. ಹೀಗೆ ಪ್ರಯತ್ನಿಸಿದಾಗ ಜೇನಿನ ಬಹುಭಾಗ ತಮ್ಮ ಕೈಗೆ ಅಂಟಿಕೊಳ್ಳುತ್ತದೆ. ಇದನ್ನು ನೋಡಿದ ಅವರು ಯೋಚನೆ ಮಾಡುತ್ತಾರೆ, ನಾನು ಕೈಯನ್ನು ತೊಳೆದುಕೊಂಡರೆ ಜೇನೆಲ್ಲ ನೀರಿನಲ್ಲಿ ಹೋಗಿಬಿಡುತ್ತದೆ. ಹಾಗೆಯೇ ಬಿಟ್ಟರೆ ವೇಸ್ಟ್ ಆಗುತ್ತದೆ. ವ್ಯರ್ಥವಾಗುತ್ತದೆಂದು ತಿಳಿದು ಅದನ್ನು ನೆಕ್ಕಲು ಶುರು ಮಾಡುತ್ತಾರೆ. ಹೀಗೆ ಅಧಿಕಾರಸ್ಥ ಜನರು ಈ ರೀತಿ ಮಾಡುತ್ತಾರೆ. ಇದನ್ನು ಸರಿಪಡಿಸುವುದು ಹೇಗೆ ? ಇಂಥ ಭ್ರಷ್ಟಾಚಾರವನ್ನು ನಿಯಂತ್ರಣ ಮತ್ತು ನಿರ್ಮೂಲ ಮಾಡುವುದು ಮೂಲಭೂತ ಸಮಸ್ಯೆಯಾಗಿರುವುದರಿಂದ ನಮ್ಮ ಮುಂದಿರತಕ್ಕಂಥ ಈ ಲೋಕಾಯುಕ್ತ ಕಾನೂನಿನಲ್ಲಿ ಇದನ್ನು ನಿಯಂತ್ರಣಗೊಳಿಸಿ ತಪ್ಪು ಮಾಡಿದವರಿಗೆ ಶಿಕ್ಷೆಗೆ ಗುರಿಪಾಡುವುದನ್ನು ಈ ಕಕ್ಷೆಯಲ್ಲಿ ತೋರಿಸಿದ್ದೇವೆ. ತಪ್ಪು ಮಾಡಿದವರ ಕಾಗದ ಪತ್ರಗಳನ್ನು ಇಟ್ಟುಕೊಂಡು ಪ್ರಾಧಿಕಾರದ ಮುಂದೆ ವಿಚಾರಣೆ ಮಾಡತಕ್ಕಂಥ ತಿದ್ದುಪಡಿ ವಿಧೇಯಕ ಇದಾಗಿದೆ. ಇಂಥ ಕಾನೂನು ಜಾಗ್ರತಾ ಆಯೋಗಕ್ಕೆ ಪೂರಕವಾಗಿದ್ದರೂ ಜಾಗ್ರತಾ ಆಯೋಗವನ್ನು ನಾವು ತೆಗೆದುಹಾಕಿರತಕ್ಕಂಥ ಸಂದರ್ಭದಲ್ಲಿ ಲೋಕಾಯುಕ್ತಕ್ಕೆ ಮೊದಲಿದ್ದದ್ದಕ್ಕಿಂತ ಹೆಚ್ಚಿನ ಅಧಿಕಾರವನ್ನು ಕೊಡದಿದ್ದರೆ ಲೋಕಾಯುಕ್ತ ಐಡಿಯಲ್ ಆಗಿ, ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದೂ, ಲೋಕಾಯುಕ್ತದ ಉದ್ದೇಶ ಸಾಧನೆಯಾಗುವುದಿಲ್ಲವೆಂದು ತಂದಿರತಕ್ಕಂಥ ತಿದ್ದುಪಡಿ ಇದು ಆಗಿರುತ್ತದೆ. ಈ ಪೂರಕವಾದ ತಿದ್ದುಪಡಿ ಸರ್ವೇ ಸಾಮಾನ್ಯವಾಗಿ ಸೀಮಿತವಾದ ವಿಷಯವಾಗಿರುತ್ತದೆ. ಸನ್ಮಾನ್ಯ ಸದಸ್ಯರು ಇದರ ಅರ್ಥವನ್ನು ಗ್ರಹಿಸಿ ಈ ತಿದ್ದುಪಡಿ ವಿಧೇಯಕಕ್ಕೆ ಒಮ್ಮತವನ್ನು ಸೂಚಿಸಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು.—ಪ್ರಸ್ತಾವನೆಯನ್ನು ಮತಕ್ಕೆ ಹಾಕುತ್ತೇನೆ. ''ಗೌರವಾನ್ವಿತ ಇಸವಿಯ ಕರ್ನಾಟಕ ಲೋಕಾಯುಕ್ತ ವಿಚಾರಣಾ (ಸಾಕ್ಷಿಗಳ ಹಾಜರಾತಿ, ದಾಖಲೆಗಳ ಒದಗಿಸುವಿಕೆ ಮತ್ತು ಇನ್ನಿತರ ಉಪಬಂಧಕಗಳು) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''.

ಪ್ರಸ್ತಾವನೆಯನ್ನು ಅನುಮೋದಿಸಲಾಯಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 8ರ ವರೆಗೆ.—

ಅಧ್ಯಕ್ಷರು.—ಖಂಡ 2ರಿಂದ 8ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 8ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 9

ಅಧ್ಯಕ್ಷರು.—ಖಂಡ 9ಕ್ಕೆ ಮಾನ್ಯ ಆರ್. ವೆಂಕಟರಾಮಯ್ಯನವರು ಒಂದು ತಿದ್ದುಪಡಿಯನ್ನು ಕೊಟ್ಟಿದ್ದರು. ಅದನ್ನು ಮಂಡಿಸಲು ಅವರು ಇಲ್ಲ. ಆದ್ದರಿಂದ ಸಭೆಯ ಮುಂದಿರುವ 9ನೇ ಖಂಡವನ್ನು ಸಭೆಯ ಮುಂದೆ ಅಂಗೀಕಾರಕ್ಕೆ ಇಡುತ್ತೇನೆ.

''ಖಂಡ 9 ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಖಂಡ 9 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 10 ಮತ್ತು 11.

ಅಧ್ಯಕ್ಷರು.— ''ಖಂಡ 10 ಮತ್ತು 11ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 10ರಿಂದ 11ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ.—

ಅಧ್ಯಕ್ಷರು.—''ಪ್ರಸ್ತಾವ ಏನೆಂದರೆ'' ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ...

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

''ಗೌರವನೀಯ ಇಸವಿಯ ಕರ್ನಾಟಕ ಇಲಾಖಾ ವಿಚಾರಣ (ಸಾಕ್ಷಿಗಳ ಹಾಜರಾತಿ, ದಾಖಲೆಗಳ ಒದಗಿಸುವಿಕೆ ಮತ್ತು ಇನ್ನಿತರ ಉಪಬಂಧಕಗಳು) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—''ಪ್ರಸ್ತಾವ ಏನೆಂದರೆ'' ಗೌರವನೀಯ ಇಸವಿಯ ಕರ್ನಾಟಕ ಇಲಾಖಾ ವಿಚಾರಣ (ಸಾಕ್ಷಿಗಳ ಹಾಜರಾತಿ, ದಾಖಲೆಗಳ ಒದಗಿಸುವಿಕೆ ಮತ್ತು ಇನ್ನಿತರ ಉಪ ಬಂಧಕಗಳು) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಪ್ರದೇಶದೊಳಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ಎರಡನೇ ತಿದ್ದುಪಡಿ) ವಿಧೇಯಕ ೧೯೮೬.

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಮಾನ್ಯ ಅಧ್ಯಕ್ಷರೇ ೧೯೮೬ನೇ ಕರ್ನಾಟಕ ಪ್ರದೇಶದೊಳಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈ ಕಾನೂನಿನಲ್ಲಿ ೧೭–೧೮ನೇ ವಿಷಯಗಳು ತದನಂತರ ಆದ ಕಾನೂನುಗಳ ಪ್ರಕಾರ ಐಟಮ್‌ಗಳನ್ನು ಬಿಟ್ಟುಬಿಟ್ಟಿದ್ದಾರೆ. ಆ ಐಟಮ್‌ಗಳನ್ನು ಬಿಟ್ಟು ಬಿಟ್ಟ ಮೇಲೆ ಹೊಸ ಮಸೂದೆಗೆ ಅನುಮತಿ ದೊರಕದೆ ಹೊಸ ಕಾನೂನು ಜಾರಿಗೆ ಬಂದಿದೆ. ಇಲ್ಲಿ ೧೭–೧೮ರ ನಂತರ ಏನು ಐಟಂಗಳಿಗೆ ಸಂಬಂಧಪಟ್ಟ ಕಾನೂನು ಆದಂಥದ್ದು ಇದೆ ಅದನ್ನು ಕಾನೂನಿನಿಂದ ತೆಗೆಯಬೇಕೆಂದು ಮಾಡಿದ್ದಾರೆ. ಆದ್ದರಿಂದ ಈ ತಿದ್ದುಪಡಿ ಮಸೂದೆಗೆ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—''೧೯೮೬ನೇ ಕರ್ನಾಟಕ ಪ್ರದೇಶದೊಳಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವವನ್ನು ಅನುಮೋದಿಸಲಾಯಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ರಿಂದ ೩ರ ವರೆಗೆ

ಅಧ್ಯಕ್ಷರು.—''ಖಂಡ ೨ರಿಂದ ೩ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ರಿಂದ ೩ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—''ಪ್ರಸ್ತಾಪ ಏನೆಂದರೆ'' ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)